ಓ.ಎಸ್.ನಂ.376/2016

ಡಿ.ಡಬ್ಲ್ಯು:1

**ದಿನಾಂಕ:25.11.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ.ಎಂ.ಆರ್. ವಕೀಲರಿಂದಃ**

ವಾದಿ ಮಂಗಳ ರವರ ವಿರುದ್ಧ ನಾನು ಅಸಲು ದಾವಾ ಸಂಖ್ಯೆ.388/2016 ರಂತೆ ಶಾಶ್ವತ ತಡೆಯಾಜ್ಞೆ ಕೋರಿ ದಾವೆ ದಾಖಲು ಮಾಡಿದ್ದೇನೆ ಅಂದರೆ ಸರಿ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅಂದರೆ ಸರಿ.

**ಡಿ.ಡಬ್ಲ್ಯು:1**

ಸಾಕ್ಷಿಗೆ ಒಂದು ನಕ್ಷೆಯನ್ನು ತೋರಿಸಿ, ಸದರಿ ನಕ್ಷೆಯನ್ನು ನೀವು ಅಸಲು ದಾವಾ ಸಂಖ್ಯೆ.388/2016 ರಲ್ಲಿ ಹಾಜರುಪಡಿಸಿರುವ ನಿಮ್ಮ ದಾಖಲೆ ಎಂದು ಕೇಳಲಾಗಿ, ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ದೃಢೀಕೃತ ನಕಲಿನ ನಕ್ಷೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಜಿ.ಡಿ.ಚಾವ್ಡರವರಿಂದ 1979 ರಲ್ಲಿ ಯಶೋದಮ್ಮ ರವರು ಒಂದು ನಿವೇಶನವನ್ನು ಖರೀದಿ ಮಾಡಿರುತ್ತಾರೆ ಅಂದರೆ ಸರಿ. ಸದರಿ ನಿವೇಶನದ ವಿಸ್ತೀರ್ಣ 308X200 ಅಡಿಗಳಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಯಲ್ಲಿಯೂ ಸಹ ದಾವಾ ಆಸ್ತಿಯ ವಿಸ್ತೀರ್ಣ 308X200 ಅಡಿ ಎಂದು ನಮೂದಿಸಿರುತ್ತಾರೆ ಅಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗೆ ಅತ್ತಿಗೆ ಯಶೋದಮ್ಮ ರವರು 1979 ರಲ್ಲಿ ಖರೀದಿಸಿರುವ 308X200 ಅಡಿಗಳ ನಿವೇಶನದಲ್ಲಿ ಅಂದಿನಿಂದ ಯಶೋದಮ್ಮ ರವರು ಸ್ವಾಧೀನ ಇದ್ದು, ಸದರಿ ಆಸ್ತಿಯನ್ನು 1 ನೇ ವಾದಿಗೆ ದಾನಪತ್ರದ ಮುಖಾಂತರ ನೀಡಿದ ನಂತರ 1 ನೇ ವಾದಿಯು ಸದರಿ ಆಸ್ತಿಯ (ದಾವಾ ಆಸ್ತಿಯ) ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

1979 ರಲ್ಲಿ ದಾವಾ ಆಸ್ತಿಯನ್ನು ವಾದಿ ಅತ್ತಿಗೆ ಯಶೋದಮ್ಮ ಅವರು ಖರೀದಿ ಮಾಡಿದಾಗ ಅದರ ಚಕ್ಕುಬಂದಿ ಪೂರ್ವಕ್ಕೆ:ಸಣ್ಣತಿಮ್ಮಣ್ಣ ಮತ್ತು ಬೀರಪ್ಪ ಪಶ್ಚಿಮಕ್ಕೆ:ಕೆ.ಎಂ.ರಸ್ತೆ, ಉತ್ತರಕ್ಕೆ:ಕಾಶೀ ವಿಶ್ವನಾಥರವರ ಆಸ್ತಿ ಮತ್ತು ದಕ್ಷಿಣಕ್ಕೆ:ಎಲ್.ಸಿ.ರವಿಂದ್ರಕುಮಾರ ಅವರ ಸ್ವತ್ತು ಅಂದರೆ ನಾನು ಖರೀದಿ ಮಾಡಿರುವ ಸ್ವತ್ತು ಎಂದಾಗಿರುತ್ತದೆ ಅಂದರೆ ಸಾಕ್ಷಿಯು ಸದರಿ ಚಕ್ಕುಬಂದಿ ಮತ್ತು ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಆಸ್ತಿಯನ್ನು ಎಲ್.ಸಿ.ರವಿಂದ್ರಕುಮಾರ ಅವರು 1979 ರಲ್ಲಿ ಖರೀದಿ ಮಾಡಿರುತ್ತಾರೆ. ನನಗೆ ಆಸ್ತಿಯನ್ನು ಮಾರಾಟ ಮಾಡಿದ ಎಲ್.ಸಿ.ರವಿಂದ್ರಕುಮಾರ ಅವರು 1979 ರಲ್ಲಿ ಪೂರ್ವ-ಪಶ್ಚಿಮ 272 ಅಡಿ ಮತ್ತು ಉತ್ತರ-ದಕ್ಷಿಣ 280 ಅಡಿಗಳನ್ನು ಖರೀದಿ ಮಾಡಿರುತ್ತಾರೆ. ಸದರಿ ಎಲ್.ಸಿ.ರವಿಂದ್ರಕುಮಾರ ಅವರು ಆಸ್ತಿಯನ್ನು ಖರೀದಿಸಿದ

ಕ್ರಯಪತ್ರದಲ್ಲಿಯೂ ಸಹ ಚಕ್ಕುಬಂದಿ ಪೂರ್ವಕ್ಕೆ:ಸಣ್ಣತಿಮ್ಮಣ್ಣ ಮತ್ತು ಬೀರಪ್ಪ ಪಶ್ಚಿಮಕ್ಕೆ:ಕೆ.ಎಂ.ರಸ್ತೆ ಎಂದು ನಮೂದು ಇದೆ ಅಂದರೆ ಸರಿ, ಸಾಕ್ಷಿ ಮುಂದುವರಿದು ಅದನ್ನು ತಿದ್ದುಪಡಿ ಮಾಡಿಸಿ ನಂತರ ನಾನು ಆಸ್ತಿ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ತಿದ್ದುಪಡಿಯನ್ನು ಯಾವ ದಾಖಲೆ ಆಧಾರದ ಮೇಲೆ ಮಾಡಲಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

1979 ರಲ್ಲಿ ಕಾಶೀ ವಿಶ್ವನಾಥ ಎಂಬುವವರು ಸಹ ದಾವಾ ಆಸ್ತಿ ಇರುವ ಏರಿಯಾದಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದಾರೆ ಅಂದರೆ ಸರಿ. ಅವರ ಆಸ್ತಿಯ ಚಕ್ಕುಬಂದಿಯೂ ಸಹ ಪೂರ್ವಕ್ಕೆ:ಸಣ್ಣತಿಮ್ಮಣ್ಣ ಮತ್ತು ಬೀರಪ್ಪ ಪಶ್ಚಿಮಕ್ಕೆ:ಕೆ.ಎಂ.ರಸ್ತೆ ಎಂದು ನಮೂದಾಗಿದೆ ಅಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಆಸ್ತಿಯ ಮೂಲ ಮಾಲೀಕರಾದ ಜೆ.ಡಿ.ಚಾವ್ಡ ರವರು ಮಾರಾಟ ಮಾಡಿರುವ ಎಲ್ಲಾ ಆಸ್ತಿಯ ಕ್ರಯಪತ್ರಗಳಲ್ಲಿ ಚಕ್ಕುಬಂದಿಯನ್ನು ಪೂರ್ವಕ್ಕೆ:ಸಣ್ಣತಿಮ್ಮಣ್ಣ ಮತ್ತು ಬೀರಪ್ಪ ಪಶ್ಚಿಮಕ್ಕೆ:ಕೆ.ಎಂ.ರಸ್ತೆ ಎಂದು ನಮೂದು ಮಾಡಲಾಗಿರುತ್ತದೆ ಅಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಆಸ್ತಿಯ ಪೂರ್ವ ಮಾಲೀಕರಾದ ಎಲ್.ಸಿ.ರವಿಂದ್ರಕುಮಾರ ಅವರು ಈ ದಾವೆಯ ವಾದಿಯ ವಿರುದ್ಧ ದಾವಾ ಆಸ್ತಿಗೆ ಸಂಬಂಧಿಸಿದಂತೆ ಮತ್ತು ನನಗೆ ಮಾರಾಟ ಮಾಡಿರುವ ಆಸ್ತಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಛನ್ಯಾಯಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.2378/15 ಮತ್ತು 2379/2015 ರಂತೆ ಮೇಲ್ಮನವಿ ಸಲ್ಲಿಸಿ ಅದರೊಂದಿಗೆ ಹಾಜರುಪಡಿಸಿದ ದಾಖಲೆಗಳಲ್ಲಿ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ:ಸಣ್ಣತಿಮ್ಮಣ್ಣ ಮತ್ತು ಬೀರಪ್ಪ ಪಶ್ಚಿಮಕ್ಕೆ:ಕೆ.ಎಂ.ರಸ್ತೆ ಎಂದು ನಮೂದು ಇರುವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನಾನು ವಾದಿ ವಿರುದ್ಧ ದಾವೆ ದಾಖಲಿಸುವ ಮುಂಚಿನಿಂದಲೂ ಸಹ ವಾದಿಯ ದಾವಾ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿ ದಾವಾ ಆಸ್ತಿಯನ್ನು ವಶಪಡಿಸಿಕೊಳ್ಳುವ ಉದ್ದೇಶ ಹೊಂದಿ ವಾದಿಯ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತೇನೆ ಅಂದರೆ ಸರಿಯಲ್ಲ.

ನನ್ನ ಆಸ್ತಿಯ ಪೂರ್ವ ಮಾಲೀಕರಾದ ಎಲ್.ಸಿ.ರವಿಂದ್ರಕುಮಾರ ಅವರು ನನಗೆ ಮಾರಾಟ ಮಾಡಿರುವ ಆಸ್ತಿಯ ಚಕ್ಕುಬಂದಿಯನ್ನು ಕಾನೂನು ಬಾಹಿರವಾಗಿ ಬದಲಾಯಿಸುವ ಹುನ್ನಾರ ಹೊಂದಿದ್ದರು ಅಂದರೆ ಸರಿಯಲ್ಲ.

ಓ.ಎಸ್.ನಂ.376/2016

**ಡಿ.ಡಬ್ಲ್ಯು:1**

ನನ್ನ ಆಸ್ತಿಯ ಉತ್ತರಕ್ಕೆ ವಾದಿಗೆ ಸೇರಿದ ದಾವಾ ಆಸ್ತಿ ಇದ್ದು, ನನ್ನ ಆಸ್ತಿಯ ಪೂರ್ವಕ್ಕೆ ವಾದಿಗೆ ಸೇರಿದ ದಾವಾ ಆಸ್ತಿ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಎಲ್.ಸಿ.ರವಿಂದ್ರಕುಮಾರ ಅವರಿಂದ ಆಸ್ತಿಯನ್ನು ಖರೀದಿ ಮಾಡುವಾಗ ಪುರಸಭೆಯವರಿಂದ ಅಳತೆ ಮಾಡಿಸಿರುತ್ತೇನೆ. ಆ ಬಗ್ಗೆ ಪುರಸಭೆಯವರಿಂದ ನಕ್ಷೆ ಪಡೆದು ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ನಾನು ಖರೀದಿಸಿರುವ ಆಸ್ತಿಯನ್ನು ಅಳತೆ ಮಾಡುವ ಸಮಯದಲ್ಲಿ ನನ್ನ ಆಸ್ತಿಯ ಅಕ್ಕ-ಪಕ್ಕದವರಿಗೆ ನೋಟೀಸನ್ನು ನೀಡಿರುವುದಿಲ್ಲ. ನಾನು, ಪುರಸಭೆ ಅಧಿಕಾರಿಗಳು, ಎಲ್.ಸಿ.ರವಿಂದ್ರಕುಮಾರ ಮತ್ತು ಜೆ.ಡಿ.ಚಾವ್ಡ ರವರು ಸೇರಿಕೊಂಡು ನನ್ನ ಆಸ್ತಿಯ ಚಕ್ಕುಬಂದಿಯನ್ನು ಬದಲಾಯಿಸಿ ವಾದಿಗೆ ತೊಂದರೆ ಕೊಡುತ್ತಿದ್ದೇವೆ ಅಂದರೆ ಸರಿಯಲ್ಲ.  ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತೇನೆ ಅಂದರೆ ಸರಿಯಲ್ಲ.  ದಿಃ19.09.2021 ರಂದು ವಾದಿಯು ನನ್ನ ವಿರುದ್ಧ ಪೋಲೀಸರಿಗೆ ದೂರು ನೀಡಿದ್ದಾರೆ ಅಂದರೆ, ಸುಳ್ಳು ದೂರು ನೀಡಿದ್ದಾರೆ ಎಂದು ನುಡಿಯುತ್ತಾರೆ. ದಿಃ26.03.2016 ರಂದು ನಾನು ನನ್ನ ಮಕ್ಕಳು ಮತ್ತು ಇತರರು ಸೇರಿಕೊಂಡು ವಾದಿಯ ದಾವಾ ಆಸ್ತಿ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತೇವೆ ಎಂದು ವಾದಿಯು ನಮ್ಮ ವಿರುದ್ಧ ಪೋಲೀಸರಿಗೆ ದೂರು ನೀಡಿರುತ್ತಾರೆ ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಪೋಲೀಸರು ನನ್ನ ಮತ್ತು ನನ್ನ ಮಕ್ಕಳನ್ನು ಠಾಣೆಗೆ ಕರೆದು ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿಪಡಿಸದಂತೆ ತಿಳುವಳಿಕೆ ಹೇಳಿ ಕಳುಹಿಸಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು-ಅಧಿಕಾರ ಇಲ್ಲದಿದ್ದರೂ ಸಹ ನಿರಂತರವಾಗಿ ದಾವಾ ಆಸ್ತಿಯಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.